SCHOLARSHIP – 2

- **ವಿದ್ಯಾರ್ಥಿವೇತನದ ಹೆಸರು: "ಪದವಿ ಮಟ್ಟದಲ್ಲಿ ಓದುವ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ವಿದ್ಯಾರ್ಥಿವೇತನ (ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ)"**

- **ವಿದ್ಯಾರ್ಥಿವೇತನ ಪ್ರಾರಂಭಿಸಲಾದ ವರ್ಷ :** 2001–02

- **ಕಾರ್ಯಕ್ರಮದ ಉದ್ದೇಶಗಳು:** ಪದವಿ ಮಟ್ಟದಲ್ಲಿ ವಿಜ್ಞಾನ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ಈ ಯೋಜನೆ ಜಾರಿಗೆ ತರಲಾಗಿದೆ.

- **ಅರ್ಹತೆಗಳು / ನಿಬಂಧನೆಗಳು**

  - ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ವಿಜ್ಞಾನ (ಬಿ.ಎಸ್ಸಿ.)ವ್ಯಾಸಂಗ ಮಾಡುತ್ತಿರುವ ಉತ್ತಮ & ಪ್ರತಿಭಾವಂತ ವಿದ್ಯಾರ್ಥಿಗಳು ಅರ್ಹರು.

  - ಪ್ರಥಮ ಬಿ.ಎಸ್ಸಿ. ಗೆ ಸೇರಿರುವ ಹಾಗೂ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಭೂಗರ್ಭಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳಲ್ಲಿ ಕನಿಷ್ಠ 2 ವಿಷಯಗಳನ್ನಾದರೂ ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು / ವಿದ್ಯಾರ್ಥಿನಿಯರು ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುತ್ತಾರೆ.

  - ಪ್ರತಿ ವಿದ್ಯಾರ್ಥಿನಿಗೆ ವಾರ್ಷಿಕ ರೂ.5,000–00ಗಳಂತೆ ಮಂಜೂರಾತಿ ನೀಡಲಾಗುವುದು.

  - ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಶೇ.65 ಅಂಕ, ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶೇ.60 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

  - ಪದವಿ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ.ಯಲ್ಲಿ ನೂತನ ವಿದ್ಯಾರ್ಥಿವೇತನಕ್ಕೆ ಹಾಗೂ ನವೀಕರಣ ವಿದ್ಯಾರ್ಥಿಗಳು ಹಿಂದಿನ ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿಯೇ ಉತ್ತೀರ್ಣರಾಗಿರಬೇಕು.

  - ಈ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು ಒಂದು ವೇಳೆ ವರ್ಷ ಮಧ್ಯದಲ್ಲಿ ಕಾಲೇಜು ಬಿಟ್ಟಲ್ಲಿ ಮತ್ತು ಸಾಕಷ್ಟು ಹಾಜರಾತಿ ಇಲ್ಲದಿದ್ದಲ್ಲಿ ಅವರಿಂದ ಅವರಿಗೆ ನೀಡಿರುವ ಪೂರ್ಣ ವಿದ್ಯಾರ್ಥಿವೇತನದ ಹಣವನ್ನು ಅವರುಗಳಿಗೆ ವರ್ಗಾವಣೆ ಪತ್ರ ವಿತರಿಸುವ ಮೊದಲು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡತಕ್ಕದ್ದು. ಇಲ್ಲದಿದ್ದಲ್ಲಿ ಈ ಮೊತ್ತವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಂದ ವಸೂಲಿ ಮಾಡಲಾಗುವುದು.

  - ಈ ವಿದ್ಯಾರ್ಥಿವೇತನದಡಿ ಫಲಾನುಭವಿಗಳಾದ ವಿದ್ಯಾರ್ಥಿಗಳು ಪ್ರಥಮ & ದ್ವಿತೀಯ ಬಿ.ಎಸ್ಸಿ.ಯ ಹಿಂದಿನ ಪದವಿಯ ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಕನಿಷ್ಠ ಶೇ.60 ಅಂಕಗಳನ್ನಾದರೂ ಪಡೆಯಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅವರುಗಳು ಮುಂದಿನ ಸಾಲಿನಲ್ಲಿ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

SCHOLARSHIP – 2

- **NAME OF THE SCHEME : SCHOLARSHIP TO ENCOURAGE BRIGHT STUDENTS TO STUDY SCIENCE AT DEGREE LEVEL (SIR C.V. RAMAN SCHOLARSHIP)**
- YEAR IN WHICH INTORDUCED : 2001-02
- AIM OF THE SCHEME: To Encourage the Science students in Degree Level.
- **ELIGIBILITY CRITERIA** :
  - Students should be are meritorious, talented and are pursuing Science stream in Degree courses (Bachelor of Science).
  - The I year B.Sc. students who are studying pursuing science and have chosen at least two basic Science subjects like Physics, Chemistry, Mathematics, Geology, Boteny and Zoology are eligible to apply for this scholarship
  - Every year, Government of Karnataka is sanctioning the Grants/Amounts with regard to the ongoing schemes under the Beneficiary student gets Rs.5,000-00 per Annum under this scholarship.
  - Studnets belonging to the General category should have secured 65% marks and SC & ST Students should have secured 60% marks in the in previous exam.
  - The student should have passed the previous examination in the First Attempt.
  - If the beneficiary students discontinue the College after getting the Scholarship under this Scheme or if the student has less attendance, the sanctioned amount must recovered from the Student while issuing the Transfer Certificate and be returned to the Government through Challan. Otherwise the Amount should recovered from the Principal.
  - Once the student receives this Scholarship, he/she should maintain 60% Marks in all semesters. Otherwise the student will not be eligible to get the scholarship in the next year.